ಎಲ್ಲಾ ವರ್ಗದ ಯುವಕರು ಓಕುಳಿಯ ಹಿಂದಿನ ದಿನವೇ ಗುಡ್ಡದ ಕೆಳಗಿರುವ ಹೊಂಡಕ್ಕೆ ಹುರುಪಿನಿಂದ ಬಾವಿಯ ನೀರು ಸೇದಿಕೊಂಡು ಬಂದು ಹೊಂಡ ತುಂಬಿಸುವರು. ಓಕುಳಿಯ ದಿನ, ಹೊಂಡದಲ್ಲಿನ ನೀರನ್ನು ಮೇಲು ಜನಾಂಗದ ಯುವಕರು ಬಕೀಟು, ಚೆಂಬುಗಳಲ್ಲಿ ತುಂಬಿಕೊಂಡು ಬಂದು, ಕೆಳಜಾತಿಯ ಹೆಂಗಸರ ಮೇಲೆ ರಭಸವಾಗಿ ಎರಚುವರು. ಹೆಂಗಸರು ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತ ಮಾರುತ್ತರವಾಗಿ ಹಸಿ ಜಬರಿಗಳನ್ನು ಕೈಯಲ್ಲಿ ಹಿಡಿದು, ನೀರು ಗೊಜ್ಜುವ ಯುವಕರ ಮೇಲೆ ಏರಿ ಬರುವರು.

ಸುತ್ತಲೂ ಊರೇ ನೆರೆದು, ಕೇಕೆ ಹಾಕಿ, ಈ ರೋಮಾಂಚನಕಾರಿ ಪ್ರಸಂಗವನ್ನು ಕಣ್ಣು ತುಂಬಿಕೊಳ್ಳುವ ಪದ್ಧತಿ ಕಾಲಾಂತರದಿಂದ ನಡೆದು ಬಂದುದಾಗಿತ್ತು. ಮತ್ತೆ ಮತ್ತೆ ಕೆಸರು ನೀರನ್ನು ಮೈವುಣ್ಣಿಸಿಕೊಂಡ ಕೆಳಜಾತಿಯ ಹೆಂಗಸರ ಬಟ್ಟೆಯೆಲ್ಲಾ ತೊಯ್ದು, ಅವರ ದೇಹಸಿರಿ ಕೂಡಿದ ಮಂದಿಯ ಕಣ್ಣು ಕುಕ್ಕುವುದು. ರಸಿಕ ಗಂಡಸರಿಗಂತೂ ಹಬ್ಬದ ಔತಣ. ಕ್ಷಣಕ್ಷಣಕ್ಕೂ ಆವೇಶ ತುಂಬಿಕೊಳ್ಳುತ್ತಿದ್ದ ಈ ಸನ್ನಿವೇಶದಲ್ಲಿ ನೀರು ಗೊಜ್ಜುವ ಯುವಕರ ಉತ್ಸಾಹದ ಕೂಗು, ಕೆಳಜಾತಿಯ ಹೆಂಗಸರ ಕೈಗಳಲ್ಲಿನ ಜಬರಿಗಳು ಸೋಂಯ್... ಸೊಂಯ್... ಎಂದು ಬೆದರಿಸುವ ಸೊಲ್ಲು ಹೊರಡಿಸುತ್ತ ಆಕಾಶ ಭೇದಿಸುತ್ತಿದ್ದವು.

ಊರಿನವರ ಪಾಲಿಗೆ ಅದೊಂದು, ಧಾರ್ಮಿಕ ಸಂಪ್ರದಾಯದ ಅನೂಚಾನ ಪ್ರಕ್ರಿಯೆ ಅನಿಸಿದರೂ ತೀರ ಅಮಾನುಷವೇ ಆಗಿತ್ತು. ಕೆಳಸ್ತರದ ಹೆಂಗಸರೇ ಇಂಥ ಪದ್ಧತಿಗೆ ಏಕೆ ಒಳಗಾಗಬೇಕು? ಇಂಥದೊಂದು ಹೇಯ ಪದ್ಧತಿ ರೂಢಿಗೆ ಬಂದುದು ಹೇಗೆ? ಇದು ಇಡೀ ಹೆಣ್ಣುಕುಲದ ಮೇಲೆ ನಡೆಯುವ ದೌರ್ಜನ್ಯ, ಅಪಮಾನವಲ್ಲವೇ? ರಾಮಭಕ್ತನಾದ ಹನುಮಂತ ಇದನ್ನು ಅಸಹನೀಯವೆಂದು ತಿಳಿಯುತ್ತಿಲ್ಲವೇ? ದೇವರು, ಧರ್ಮ, ಪದ್ಧತಿ ಹೆಸರಲ್ಲಿ ಕೆಳಸ್ತರದ ಹೆಂಗಸರನ್ನೇ ಶೋಷಣೆಗೆ, ಕೆಟ್ಟದ್ದಕ್ಕೆ ಉಪಯೋಗಿಸಿಕೊಳ್ಳುವುದೇಕೆ? ಇಂಥ ಯಾವ ಪ್ರಶ್ನೆಗಳೂ ಊರಿನ ಮನಸ್ಸುಗಳನ್ನು ಕಾಡಿರಲಿಲ್ಲ.

★★★

ಜೀವಪುರದ ಹೊರಗೆ ಹೊಸಗಾಳಿ ಬೀಸತೊಡಗಿತ್ತು. ಅಕ್ಷರ ಬೆಳಕು ಮನುಷ್ಯ ಬದುಕನ್ನು ತುಂಬಿಕೊಳ್ಳುತ್ತ ಹೊಸ ನೆಲೆಗಾಗಿ ತುಯ್ಯತೊಡಗಿತ್ತು. ಈ ವೇಳೆಯಲ್ಲಿ ಜೀವಪುರ ಎಂದಿನಂತೆ ಇದ್ದು, ಹನುಮಂತ ದೇವರ ಜಾತ್ರೆಯು ಜರುಗಿ, ಆ ದಿನ ಮಧ್ಯಾಹ್ನದ ಇಳಿಹೊತ್ತಿನ ಮುಂಚೆ ಓಕುಳಿ ಪ್ರಾರಂಭವಾಗಿತ್ತು. ಕ್ಷಣದಿಂದ ಕ್ಷಣಕ್ಕೆ ಕೌತುಕವೂ, ಉತ್ಸಾಹವೂ, ಉತ್ಕಟಾವಸ್ಥೆ ತಲುಪಿದ ಅವಘಡವೊಂದು ಸಂಭವಿಸಿಬಿಟ್ಟಿತ್ತು. ಇಷ್ಟು ವರ್ಷಗಳ ಓಕುಳಿ ಆಚರಣೆಯಲ್ಲಿ ಘಟಿಸದೇ ಇದ್ದ ಅವಘಡವದು. ಓಕುಳಿಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಹರಿಜನ ಕೇರಿಯ ಯಲ್ಲವ್ವನ ಹದಿಹರೆಯದ ಮಗಳು ಮಂಜುಳ, ತನ್ನ ಗೆಳತಿಯರೊಂದಿಗೆ ಅಷ್ಟು ದೂರಕ್ಕೆ ನಿಂತಿದ್ದಳು. ನೀರು ಗೊಜ್ಜುವ ಒಬ್ಬ ಯುವಕ ಬಹಳ ಹೊತ್ತಿನವರೆಗೂ ಅವಳತ್ತಲೇ ತನ್ನ ದೃಷ್ಟಿ ನೆಟ್ಟಿದ್ದ. ಓಕುಳಿಯ ಸಂಭ್ರಮದಲ್ಲಿ ಎಲ್ಲರೂ ಮಗ್ನರಾಗಿರುವ ಕ್ಷಣದಲ್ಲಿ ಒಮ್ಮೆಲೆ ಆ ಯುವಕ ರಾಕ್ಷಸನಂತೆ ಅಬ್ಬರಿಸುತ್ತ, ಜನರನ್ನು ಸೀಳಿಕೊಂಡು ಹೋಗಿ, ಮಂಜುಳಾನನ್ನು ಎಳೆದುಕೊಂಡು ಬಯಲಿಗೆ ತಂದು, ನೀರು ಗೊಜ್ಜಿದ ಅವಳ ಒದ್ದೆಯಾದ ಮೈಯನ್ನು ಬಲವಾಗಿ ತಬ್ಬಿಕೊಂಡು ಕೆನ್ನೆಯನ್ನು ಚುಂಬಿಸಿದ. ಮಂಜುಳಾ ಭೀತಿಗೊಂಡು ಚೀತ್ಕರಿಸಿದ್ದಳು.

ಆಕಸ್ಮಿಕವಾಗಿ ನಡೆದ ಈ ಘಟನೆ ಓಕುಳಿಯ ಪರಿಸರವನ್ನು ತಲ್ಲಣಗೊಳಿಸಿತ್ತು. ತನ್ನ ಮಗಳ ಮೇಲೆ ಆಕ್ರಮಣ ಮಾಡಿದ ಯುವಕನ ಮೇಲೆ ದುರ್ಗಿಯ ಅವತಾರ ತಾಳಿದ ಯಲ್ಲವ್ವ, ಕೈಯಲ್ಲಿದ್ದ